# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 243 (376) |
| 2. ಮಾನ್ಯ ಸದಸ್ಯರ ಹೆಸರು | ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. ಉತ್ತರಿಸಬೇಕಾದ ದಿನಾಂಕ | **12/12/2018** |
| 4. ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)</td><td>ಕರ್ನಾಟಕ ರಾಜ್ಯದಲ್ಲಿ ಅಸಂಘಟಿತ ಕಾರ್ಮಿಕರ ಸಂಖ್ಯೆಯ ಬಗ್ಗೆ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ. ಆದರೆ, ಸಾಮಾಜಿಕ ಮತ್ತು ಆರ್ಥಿಕ ಜಾತಿ ಗಣತಿ, 2011ರನ್ವಯ ರಾಜ್ಯದಲ್ಲಿ 1.32 ಕೋಟಿ ಅಸಂಘಟಿತ ಕಾರ್ಮಿಕರು ಇರುವುದಾಗಿ ಅಂದಾಜಿಸಲಾಗಿದೆ. ಆದರೆ ಇಲಾಖೆಯ ಅಧೀನದಲ್ಲಿ ಬರುವ ಮಂಡಳಿಗಳು ಜಾರಿಗೊಳಿಸುತ್ತಿರುವ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳಡಿ ಫಲಾನುಭವಿಗಳಾಗಿ ನೋಂದಣಿಯಾಗಿರುವ ಕಾರ್ಮಿಕರ ಸಂಖ್ಯೆಯು ಲಭ್ಯವಿದ್ದು, ಸದರಿ ಮಾಹಿತಿ ಕೆಳಕಂಡಂತಿದೆ:<br><br><u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ</u> : ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಅಸಂಘಟಿತ ವಲಯಕ್ಕೆ ಸೇರಿದ ಕಟ್ಟಡ ಕಾರ್ಮಿಕರನ್ನು ಮಂಡಳಿಯಲ್ಲಿ ಫಲಾನುಭವಿಗಳಾಗಿ ನೊಂದಾಯಿಸಲಾಗಿದ್ದು, ಸದರಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಖ್ಯೆಯ ಜಿಲ್ಲಾವಾರು ವಿವರವನ್ನು <u>ಅನುಬಂಧ-1</u> ರಲ್ಲಿ ಒದಗಿಸಿದೆ.<br><br><u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:</u> ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಜಾರಿಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳಡಿ ನೋಂದಾಯಿತರಾದ ಅಸಂಘಟಿತ ಕಾರ್ಮಿಕರ ವಿವರ ಕೆಳಕಂಡಂತಿದೆ –<br><br><table><tr><th>ಕ್ರ.ಸಂ.</th><th>ಯೋಜನೆ</th><th>ಕಾರ್ಮಿಕರ ಸಂಖ್ಯೆ</th></tr><tr><td>1.</td><td>ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ</td><td>7,78,485</td></tr><tr><td>2.</td><td>ಎನ್.ಪಿ.ಎಸ್. ಲೈಟ್ ಸ್ವಾವಲಂಬನ್ ಪಿಂಚಣಿ ಯೋಜನೆ</td><td>50,666</td></tr></table></td></tr>
<tr><td>ಆ)</td><td>ಈ ಕಾರ್ಮಿಕರಿಗೆ ಹಾಲಿ ನೀಡುತ್ತಿರುವ ವೇತನ ಹಾಗೂ ಇನ್ನಿತರೆ ಸೌಲಭ್ಯಗಳೇನು;</td><td><u>ವೇತನ ಸೌಲಭ್ಯಗಳು</u> :<br>ಅಸಂಘಟಿತ ಕಾರ್ಮಿಕರು ಸೇರಿದಂತೆ ವಿವಿಧ ವರ್ಗದ ಕಾರ್ಮಿಕರಿಗೆ ಸಂಬಂಧಿಸಿದಂತೆ ಕನಿಷ್ಠ ವೇತನ ಕಾಯ್ದೆಯಡಿ 82 ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನವನ್ನು ನಿಗಧಿಪಡಿಸಿ ಕಾಲಕಾಲಕ್ಕೆ ಪರಿಷ್ಕರಿಸಲಾಗುತ್ತಿದೆ. ಆಯಾ ಅನುಸೂಚಿತ ಉದ್ದಿಮೆಯ ವ್ಯಾಪ್ತಿಗೆ ಒಳಪಡುವ ಅಸಂಘಟಿತ ಕಾರ್ಮಿಕರು ಆಯಾ ಅನುಸೂಚಿತ ಉದ್ದಿಮೆಗೆ ನಿಗಧಿಪಡಿಸಿರುವ ಕನಿಷ್ಠ ವೇತನ ದರದನ್ವಯ</td></tr>
</table>

| | | |
|---|---|---|
| | | ಹೊರಡಿಸಿರುವ ಜೀತದಾಳುಗಳ ಪುನರ್ವಸತಿ ಪರಿಷ್ಕೃತ ಮಾರ್ಗಸೂಚಿ ದಿನಾಂಕ: 18-05-2016 ರನ್ವಯ ಬಿಡುಗಡೆಗೊಂಡ ಜೀತದಾಳುಗಳಿಗೆ ಜೀತದ ತೀವ್ರತೆಯ ಆಧಾರದ ಮೇಲೆ ರೂ.1.00 ಲಕ್ಷದಿಂದ ರೂ.3.00ಲಕ್ಷದ ವರೆಗೆ ಅನುದಾನವನ್ನು ನೇರವಾಗಿ ಜೀತದಾಳುಗಳಿಗೆ ಬಿಡುಗಡೆ ಮಾಡಲಾಗುವುದು.<br>• ಬಿಡುಗಡೆಗೊಂಡ ಜೀತದಾಳುಗಳಿಗೆ ಆದ್ಯತೆ ಮೇರೆಗೆ ಕೌಶಲ್ಯಾಭಿವೃದ್ಧಿ ಯೋಜನೆಯಡಿ ಸೌಲಭ್ಯ ಒದಗಿಸಲು ಸರ್ಕಾರ ಆದೇಶ ನೀಡಿದೆ.<br>• ರಾಜ್ಯ ಸರ್ಕಾರವು, ಜೀತವಿಮುಕ್ತ ಸಹಾಯಧನ ಯೋಜನೆಯಡಿ ಪ್ರತಿ ತಿಂಗಳು ರೂ.1000/-ರಂತೆ 24 ತಿಂಗಳವರೆಗೆ ಸಹಾಯಧನವನ್ನು ಅಯಾ ಜಿಲ್ಲಾ ಪಂಚಾಯತಿಗಳ ಮೂಲಕ ಬಿಡುಗಡೆಗೊಂಡ ಜೀತದಾಳುಗಳಿಗೆ ನೀಡಲಾಗುವುದು.<br>• ವಸತಿ ರಹಿತ ಜೀತವಿಮುಕ್ತರಿಗೆ ವಿವಿಧ ವಸತಿ ಯೋಜನೆಗಳಡಿ ಆದ್ಯತೆ ಮೇಲೆ ಸೌಲಭ್ಯ ನೀಡಲಾಗುವುದು ಹಾಗೂ ನಿವೇಶನ ರಹಿತರಿಗೆ ನಿವೇಶನ ಸಹ ನೀಡಲಾಗುವುದು.<br>• ಉದ್ಯೋಗ ಖಾತ್ರಿ ಯೋಜನೆಯಡಿ ದನದ ಕೊಟ್ಟಿಗೆ, ಜಮೀನು ಅಭಿವೃದ್ಧಿ ಕಾಮಗಾರಿಯನ್ನು ಆದ್ಯತೆ ಮೇಲೆ ನೀಡಲಾಗುವುದು.<br>ಜೀತ ವಿಮುಕ್ತರಿಗೆ ತಕ್ಷಣ ಪಡಿತರ ಚೀಟಿ ವಿತರಿಸಲಾಗುತ್ತಿದೆ. |
| ಈ) | ಕಳೆದ 3 ವರ್ಷದಿಂದ ಎಷ್ಟು ಜನ ಜೀತ ಕಾರ್ಮಿಕರನ್ನು ರಕ್ಷಿಸಲಾಗಿದೆ; ಈ ಪೈಕಿ ಎಷ್ಟು ಕಾರ್ಮಿಕರಿಗೆ ಪುನರ್ ವಸತಿ ಕಲ್ಪಿಸಲಾಗಿದೆ; ಇನ್ನುಳಿದ ಕಾರ್ಮಿಕರಿಗೆ ಪುನರ್ ವಸತಿ ಕಲ್ಪಿಸದಿರಲು ಕಾರಣಗಳೇನು; | ಕಳೆದ 3 ವರ್ಷಗಳಲ್ಲಿ 354 ಜೀತದಾಳುಗಳನ್ನು ರಕ್ಷಿಸಲಾಗಿದೆ. ಸ್ವಂತ ರಾಜ್ಯದ 81 ಜನರಿಗೆ ಪುನರ್ ವಸತಿ ಕಲ್ಪಿಸಲು ಕ್ರಮ ವಹಿಸಲಾಗಿದೆ. ಉಳಿದ 273 ಜೀತದಾಳುಗಳು ಇನ್ನಿತರೆ ರಾಜ್ಯದವರಾದುದರಿಂದ ಆಯಾರಾಜ್ಯ ಸರ್ಕಾರಗಳು ಸೌಲಭ್ಯ ಒದಗಿಸುತ್ತವೆ. |
| ಉ) | ಜೀತ ಕಾರ್ಮಿಕರಿಗೆ ಪುನರ್ ವಸತಿ ಕಲ್ಪಿಸುವ ಸಲುವಾಗಿ ಮೀಸಲಿಟ್ಟಿರುವ ಅನುದಾನ ಎಷ್ಟು; ಈ ಪೈಕಿ ಎಷ್ಟು ವೆಚ್ಚವಾಗಿದೆ; ಹಾಕಿಕೊಂಡಿರುವ ಕಾರ್ಯಕ್ರಮಗಳು ಯಾವುವು? | ಪ್ರಸಕ್ತ ಸಾಲಿನ ಅಯವ್ಯಯದಲ್ಲಿ ಜೀತದಾಳುಗಳ ಪುನರ್ವಸತಿಗಾಗಿ ರೂ.422.00 ಲಕ್ಷಗಳನ್ನು ಮೀಸಲಿಡಲಾಗಿದ್ದು, ಯಾವುದೇ ವೆಚ್ಚ ಮಾಡಿರುವುದಿಲ್ಲ. ಪ್ರಸಕ್ತ ಸಾಲಿನ ಬಿಡುಗಡೆಯಾದ ಆಯವ್ಯಯದಲ್ಲಿ ಪ್ರತಿ ಜೀತದಾಳಿನ ತುರ್ತು ಪರಿಹಾರಕ್ಕೆಂದು ಕಾರ್ಪಸ್ ನಿಧಿ ಯೋಜನೆಯಡಿ ಆಯಾ ಜಿಲ್ಲಾಧಿಕಾರಿಗಳ ಮುಖೇನ, ಪ್ರತಿ ಜೀತದಾಳುಗೆ ರೂ.20,000/-ಗಳನ್ನು ನೀಡಲು ಅವಕಾಶವಿದೆ. |

**ಕಾಇ 427 ಎಲ್‌ಇಟಿ 2018**

(ವೆಂಕಟರಮಣಪ್ಪ)
ಕಾರ್ಮಿಕ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 376(243) ಕ್ಕೆ

## ಅನುಬಂಧ-1

ಜೂನ್-2007 ರಿಂದ ಅಕ್ಟೋಬರ್ 2018 ರವರೆಗೆ ನೋಂದಣಿಯಾದ ಕಟ್ಟಡ ಕಾರ್ಮಿಕರ ಜಿಲ್ಲಾವಾರು ವಿವರ

| ಕ್ರ. ಸಂ. | ಜಿಲ್ಲೆ | ಪುರುಷರು | ಮಹಿಳೆಯರು | ಒಟ್ಟು ಕಾರ್ಮಿಕರ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 24,901 | 8,715 | 33,616 |
| 2 | ಬೆಳಗಾವಿ | 71,688 | 17,289 | 88,977 |
| 3 | ಬಳ್ಳಾರಿ | 34,077 | 11,084 | 45,161 |
| 4 | ಬೆಂಗಳೂರು | 283,969 | 50,211 | 334,180 |
| 5 | ಬೀದರ್ | 34,049 | 28,725 | 62,774 |
| 6 | ಬಿಜಾಪುರ | 31,531 | 29,266 | 60,797 |
| 7 | ಚಾಮರಾಜನಗರ | 16,276 | 3,530 | 19,806 |
| 8 | ಚಿಕ್ಕಬಳ್ಳಾಪುರ | 16,462 | 4,217 | 20,679 |
| 9 | ಚಿಕ್ಕಮಗಳೂರು | 17,857 | 9,658 | 27,515 |
| 10 | ಚಿತ್ರದುರ್ಗ | 23,946 | 8,124 | 32,070 |
| 11 | ದಾವಣಗೆರೆ | 50,954 | 13,121 | 64,075 |
| 12 | ಗದಗ | 13,415 | 3,915 | 17,330 |
| 13 | ಹಾಸನ | 23,895 | 7,921 | 31,816 |
| 14 | ಹಾವೇರಿ | 22,974 | 6,255 | 29,229 |
| 15 | ಹುಬ್ಬಳ್ಳಿ | 32,709 | 14,581 | 47,290 |
| 16 | ಕಲಬುರಗಿ | 30,042 | 23,701 | 53,743 |
| 17 | ಕಾರವಾರ | 30,492 | 24,323 | 54,815 |
| 18 | ಕೋಲಾರ | 38,169 | 27,437 | 65,606 |
| 19 | ಕೊಪ್ಪಳ | 15,865 | 7,161 | 23,026 |
| 20 | ಮಡಿಕೇರಿ | 2,881 | 1,347 | 4,228 |
| 21 | ಮಂಡ್ಯ | 25,353 | 9,081 | 34,434 |
| 22 | ಮಂಗಳೂರು | 46,510 | 4,951 | 51,461 |
| 23 | ಮೈಸೂರು | 47,600 | 7,971 | 55,571 |
| 24 | ರಾಯಚೂರು | 18,310 | 5,682 | 23,992 |
| 25 | ರಾಮನಗರ | 25,340 | 12,385 | 37,725 |

